# ಭಲೇ ಜೋಡಿ!



ದೀಪಿಕಾ ಪಡುಕೋಣೆ ಎಂಬ ಬಡಕಲು ಸುಂದರಿ, ಸಿದ್ದಾರ್ಥ ಮಲ್ಯ ಎಂಬ ಸ್ಫುರದ್ರೂಪಿ, ಶ್ರೀಮಂತನ ಜತೆ ರೋಮ್ಯಾನ್ಸ್ ನಡೆಸುತ್ತಿರುವುದು ಇದೀಗ ಜಗಜ್ಜಾಹೀರಾಗಿದೆ. ನಮ್ಮ ಯುಬಿ ಸಾಮ್ರಾಜ್ಯದ ಉತ್ತರಾಧಿಕಾರಿ ಸಿದ್ದಾರ್ಥ ಈಗಾಗಲೆ ಐಪಿಎಲ್ ಪಂದ್ಯಗಳು ನಡೆಯುವ ಕ್ರೀಡಾಂಗಣಗಳಲ್ಲೆಲ್ಲ ದೀಪಿಕಾ ಜತೆ ಕಾಣಿಸಿಕೊಂಡದ್ದು ಹಳೇ ಸುದ್ದಿ. ಅವರ ನಡುವೆ ಇರುವುದು ಸ್ನೇಹವೋ, ಪ್ರೀತಿಯೋ ಎಂಬ ಚರ್ಚೆಯೂ ಹಳೆಯದಾಯಿತು. ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದಾರೆ ಎನ್ನುವುದನ್ನು ಸಾಬೀತುಪಡಿಸುವ ಚುಂಬನದ ದೃಶ್ಯಗಳು ಕಳೆದ ವಾರ ಕಿರುತೆರೆಯ ತುಂಬೆಲ್ಲ ರಾರಾಜಿಸಿದವು.

ವಾಸ್ತವವಾಗಿ ಈ ಚುಂಬನದ ದೃಶ್ಯ ನಾಲ್ಕು ತಿಂಗಳು ಹಿಂದಿನದಂತೆ. ಜನವರಿ ಐದರಂದು ದೀಪಿಕಾಳ ಬರ್ತ್‌ಡೇ ದಿನ, ಊಟ ಮಾಡಲು ಸೇರಿದಾಗ ಸಿದ್ದಾರ್ಥ ಪಕ್ಕದಲ್ಲಿದ್ದ ಅಪ್ಪನನ್ನೂ ಲೆಕ್ಕಿಸದೆ ದೀಪಿಕಾಳನ್ನು ತಬ್ಬಿ ಮುತ್ತಿಟ್ಟನಂತೆ. ದೀಪಿಕಾ ಕೂಡಾ ಸಂತೋಷದಿಂದ ಸಹಕರಿಸಿದಳಂತೆ. ಈ ಹಿಂದೆ ರಣಬೀರ್ ಕಪೂರನ ಪ್ರೇಮಪಾಶಕ್ಕೆ ಸಿಕ್ಕು, ಬಳಿಕ ಅವನಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ನೊಂದಿದ್ದ ದೀಪಿಕಾ ಈಗ ಕರ್ನಾಟಕದ ಬ್ರ್ಯಾಂಡ್ ಹುಡುಗನಿಗೇ ಒಲಿದಿರುವುದು ಕನ್ನಡಿಗರಂತೂ ಖುಷಿ ಪಡುವ ವಿಚಾರವೇ.

'ಪ್ರೀತಿ ಆಯಿತು, ಮದುವೆ?' ಎನ್ನುವವರಿಗೆ ಉತ್ತರ ಸದ್ಯಕ್ಕೆ ಸಿಗಲಿಕ್ಕಿಲ್ಲ. ಯಾಕೆಂದರೆ ದೀಪಿಕಾ ಚಿತ್ರ ಜೀವನ ಇನ್ನೂ ಉದ್ದವಿದೆ. ಸದ್ಯಕ್ಕೆ ನಂಬರ್ ಒನ್ ಪಟ್ಟದ ಆಜುಬಾಜಿನಲ್ಲೇ ಇರುವ ದೀಪಿಕಾ ಬೇಡಿಕೆಯಲ್ಲಂತೂ ಇನ್ನೂ ಎರಡು ವರ್ಷ ಕುಸಿತ ಕಾಣಲಿಕ್ಕಿಲ್ಲ. ಹಾಗಾಗಿ ಸಂಸಾರದ ಮಾತು ಆಮೇಲೆ.

ಬಿಡುಗಡೆಯಾಗಿರುವ 'ಧಮ್ ಮಾರೊ ಧಮ್' ಚಿತ್ರದಲ್ಲಿ ದೀಪಿಕಾಳ ಭರ್ಜರಿ ಡ್ಯಾನ್ಸ್ ನೋಡಿ ಪಡ್ಡೆ ಹೈಕಳು ಚಿತ್ರದ ನಾಯಕಿ ಬಿಪಾಸಾಳನ್ನೂ ಮರೆತಂತಿದೆ. ಹಾಡು ಮತ್ತು ಡ್ಯಾನ್ಸ್ ಎರಡೂ ಸದ್ಯದ ಮಟ್ಟಿಗೆ ಜನಪ್ರಿಯತೆಯಲ್ಲಿ ಭಾರೀ ಮುಂದಿದೆ.

ಈ ಮಧ್ಯೆ ದೀಪಿಕಾಗೆ ಅಡುಗೆ ಮಾಡಲು ಬರುವುದಿಲ್ಲ ಎನ್ನುವ ವಿಷಯವೂ ಶೂಟಿಂಗ್ ಸಮಯದಲ್ಲಿ ಬೆಳಕಿಗೆ ಬಂದಿದೆ! ಪ್ರಕಾಶ್ ಝಾ ನಿರ್ದೇಶನದ ಆರಕ್ಷಣ್ ಸಿನಿಮಾದಲ್ಲಿ ದೀಪಿಕಾ ರೋಟಿ ಮಾಡುವ ದೃಶ್ಯದಲ್ಲಿ ನಟಿಸಬೇಕಿತ್ತು. ಏನು ಮಾಡಿದರೂ ರೋಟಿ ಮಾಡಲು ಆಕೆಗೆ ಆಗಲಿಲ್ಲ. ಆದರೆ ದೃಶ್ಯ ಓಕೆ ಆಗದೆ ನಿರ್ದೇಶಕರು ಕದಲಲಿಲ್ಲ. ಈಕೆಯ ಫಜೀತಿ ನೋಡಿ, ಸಹನಟ ಸೈಫ್ ಅಲಿ ನಕ್ಕನಂತೆ.

ಕೂತುಣ್ಣುವಷ್ಟು ಶ್ರೀಮಂತಿಕೆ ಇರುವ ನಟ- ನಟಿಯರು ಅಡುಗೆ ಕಲಿಯುವುದಾದರೂ ಏಕೆ? ಅದಕ್ಕೆಂದೇ ಸಾಕಷ್ಟು ನಟ- ನಟಿಯರು ಸ್ವಂತ ಹೋಟೆಲನ್ನೇ ಸ್ಥಾಪಿಸಿರುವುದೂ ಇದೆಯಲ್ಲ.. ಎನ್ನಬಹುದೆ?

**-ಬಿಂದು**

